## 12. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ– ಕುಂಸಿ

### 1. ಶಾಲೆಯ ಹಿನ್ನೆಲೆ

ಸ.ಉ.ಹಿ.ಪ್ರಾ ಶಾಲೆ ಕುಂಸಿ ಶಾಲೆಯಲ್ಲಿ 1 ರಿಂದ 7 ನೇ ತರಗತಿಗಳು ನಡೆಯುತ್ತಿದೆ. 2017–18 ನೇ ಸಾಲಿನಲ್ಲಿ ಜಾಮಿಯಾ ಮಸೀದಿ, ಕುಂಸಿ ಅಧ್ಯಕ್ಷರಾದ ತನ್ವೀರ್ ಆಹಮದ್ ಹಾಗೂ ಸದಸ್ಯರು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಸದಸ್ಯರು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರ ಸಹಕಾರರಿಂದ **'ಎಲ್‌ಕೆಜಿ ಮತ್ತು ಯುಕೆಜಿ'** ತರಗತಿಗಳನ್ನು ಆರಂಭಿಸಲಾಗಿದೆ. ಈ ತರಗತಿಗಳಲ್ಲಿ ಒಟ್ಟು 31 ಮಕ್ಕಳಿದ್ದಾರೆ. 3 ಸಹ ಶಿಕ್ಷಕಿಯರನ್ನು ಹಾಗೂ ಒಬ್ಬ ಆಯಾವನ್ನು ಈ ತರಗತಿಗಳಿಗೆ ನೇಮಿಸಿರುತ್ತಾರೆ

1 ರಿಂದ 7 ನೇ ತರಗತಿಯಲ್ಲಿ ಒಟ್ಟು 43 ಮಕ್ಕಳಿದ್ದಾರೆ. ಈ ತರಗತಿಗಳಿಗೆ ಒಬ್ಬರು ಬಡ್ತಿ ಮುಖ್ಯ ಶಿಕ್ಷಕರು ಹಾಗೂ 4 ಸಹ ಶಿಕ್ಷಕಿಯರು ಇದ್ದಾರೆ. ನಮ್ಮ ಶಾಲೆಗೆ ಮಕ್ಕಳು ಗುಂಡೂರು, ಚೋರಡಿ, ಹಳೇ ಕುಂಸಿ, ಹೊಸ ಕುಂಸಿಯಿಂದ ಮಕ್ಕಳು ಬರುತ್ತಾರೆ. ಇವರಿಗೆ ಅನುಕೂಲವಾಗಲು ಜಾಮಿಯ ಮಸೀದಿಯ ಅಧ್ಯಕ್ಷರಾದ ತನ್ವಿರ್ ಅಹಮದ್‌ರವರ ಸಹಕಾರದಿಂದ **'ಶಾಲಾ ವಾಹನದ'** ವ್ಯವಸ್ಥೆಯನ್ನು ಮಾಡಿಲಾಗಿದೆ.

### 2. ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು

- ಪೋಷಕರ ಪ್ರತಿ ಮನೆ ಮನೆಗೂ ಭೇಟಿ ನೀಡಿ ಅವರ ಮನವೊಲಿಸಿ ಮಕ್ಕಳನ್ನು ನಮ್ಮ ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ದಾಖಲು ಮಾಡಿದ್ದೇವೆ.
- ಎಲ್.ಕೆ.ಜಿ ಹಾಗೂ ಯುಕೆಜಿ ತರಗತಿಗಳನ್ನು ಪ್ರಾರಂಭಿಸಿದ್ದೇವೆ.
- ದಾನಿಗಳ ವತಿಯಿಂದ ಶಾಲಾ ವಾಹನದ ವ್ಯವಸ್ಥೆ ಮಾಡಲಾಗಿದೆ
- ದಿನಾಂಕ 21/09/2017 ರಂದು ನವಚೇತನ ಕಾರ್ಯಕ್ರಮವನ್ನು ಮಾಡಲಾಯಿತು.
- ಹೊರಸಂಚಾರವನ್ನು ಕೈಗೊಳ್ಳಲಾಯಿತು.
- ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಮಾಡಲಾಯಿತು.
- ವಿಜ್ಞಾನ ವಸ್ತುಪ್ರದರ್ಶನ ಕೈಗೊಳ್ಳಲಾಯಿತು.
- ಚಟುವಟಿಕೆ ಆಧಾರಿತ ಬೋಧನೆ ಮಾಡಲಾಗುತ್ತಿದೆ.

### 3. ಶಾಲೆಯಲ್ಲಿ ಎದುರಿಸಿದ ಸಮಸ್ಯೆಗಳು

- ನಮ್ಮ ಶಾಲೆಯ ಮಕ್ಕಳ ದಾಖಲಾತಿ ಕಡಿಮೆ ಇತ್ತು.
- ನಮ್ಮ ಶಾಲೆಯು ಹೊಸಕುಂಸಿಯಲ್ಲಿ ಇರುವುದರಿಂದ ಹಳೇಕುಂಸಿಯಿಂದ ಬರುವ ದಾರಿಯ ಮಧ್ಯದಲ್ಲಿ ಕೆರೆ ಇರುವುದರಿಂದ ಶಾಲೆಗೆ ತೊಂದರೆಯಾಗುತ್ತದೆ ಎಂದು ಹಳೇ ಕುಂಸಿ ಕನ್ನಡಶಾಲೆಗೆ ದಾಖಲಾಗುತ್ತಿದ್ದರು.
- ಶಾಲಾವಾಹನದ ವ್ಯವಸ್ಥೆ ಇಲ್ಲದ ಕಾರಣ ಚೋರಡಿ, ಗುಂಡೂರು ಮಕ್ಕಳು ನಮ್ಮ ಶಾಲೆಗೆ ಬರಲು ಕಷ್ಟವಾಗುತ್ತಿತ್ತು.
- ಎಲ್.ಕೆ.ಜಿ. ಯುಕೆ.ಜಿ ತರಗತಿಗಳು ಇಲ್ಲದ ಕಾರಣ ಶಾಲೆಯ ದಾಖಲಾತಿ ಕಷ್ಟವಾಗಿತ್ತು.
- ಕೊಠಡಿಗಳ ಕೊರತೆ ಇತ್ತು.

## 4. ತಾವು ಕೈಗೊಂಡ ಪರಿಹಾರ ಕ್ರಮಗಳು

- ಮಕ್ಕಳ ದಾಖಲಾತಿ ಹೆಚ್ಚಿಸಲು ಪೋಷಕರ ಮನವೊಲಿಸಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲಾಯಿತು.
- ಶಾಲೆಯ ದಾಖಲಾತಿ ಹೆಚ್ಚಿಸಲು ಎಲ್.ಕೆ.ಜಿ. ಮತ್ತು ಯು.ಕೆ.ಜಿ ತರಗತಿಗಳನ್ನು ಪ್ರಾರಂಭಿಸಲಾಯಿತು.
- ಮಕ್ಕಳ ಅನುಕೂಲಕ್ಕಾಗಿ ದಾನಿಗಳ ವತಿಯಿಂದ ಉಚಿತವಾಗಿ ಶಾಲಾ ವಾಹನದ ವ್ಯವಸ್ಥೆ ಮಾಡಲಾಗಿದೆ.
- ಈ ಸಾಲಿನಲ್ಲಿ ಹೊಸದಾಗಿ 5 ಕೊಠಡಿಗಳನ್ನು ನಿರ್ಮಾಣ ಮಾಡಲು ಜಿಲ್ಲಾ ಪಂಚಾಯತ್ ವತಿಯಿಂದ ಹಣ ಮಂಜೂರು ಆಗಿದೆ.
- ಪೋಷಕರನ್ನು ಶಾಲೆಯೆಡೆಗೆ ಆಕರ್ಷಿಸಲು ಶಾಲಾ ವಾರ್ಷಿಕೋತ್ಸವವನ್ನು ಮಾಡಲಾಯಿತು.

## 5. ದಾನಿಗಳು

1. ತನ್ವೀರ್ ಆಹಮದ್, ಆಧ್ಯಕ್ಷರು, ಜಾಮಿಯ ಮಸೀದಿ, ಕುಂಸಿ ಮತ್ತು ಸದಸ್ಯರು
2. ಶಾಲಾ ಎಸ್.ಡಿ.ಎಂ. ಸಿ ಅಧ್ಯಕ್ಷರು ಮತ್ತು ಸದಸ್ಯರು
3. ಪೋಷಕರು ಹಾಗೂ ಗ್ರಾಮಸ್ಥರು.







